ಓ ಎಸ್ ನಂ. 41/2016
ಡಿ ಡಬ್ಲ್ಯು 1
ದಿನಾಂಕ 07-12-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀ ಡಿ ಸಿ ವಕೀಲರಿಂದಃ

ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿಗಳು ಏನು ದಾವೆ ಹೂಡಿದ್ದಾರೆ ಎಂಬ ವಿಚಾರ ನನಗೆ ತಿಳಿದಿದೆ. ಯಾವ ಆಸ್ತಿಗೆ ಸಂಬಂದಪಟ್ಟಂತೆ ದಾವೆ ಹೂಡಿರುತ್ತಾರೆ ಎಂಬ ವಿಚಾರವನ್ನು ನಾನು ತಿಳಿದುಕೊಂಡಿರುತ್ತೇನೆ. ಸದರಿ ದಾವೆ ನನ್ನ ತಂದೆಯ ಆಸ್ತಿಗೆ ಸಂಬಂದಪಟ್ಟಂತೆ ಹೂಡಿರುತ್ತಾರೆ. ದಾವಾ ಸ್ವತ್ತಿನ ಅಸೆಸ್ಮೆಂಟ್ ನಂಬರ್ ನನಗೆ ತಿಳಿದಿದೆ. ದಾವಾ ಆಸ್ತಿಯನ್ನು 1979 ರಲ್ಲಿ ನನ್ನ ತಂದೆ ಖರೀದಿಸಿರುತ್ತಾರೆ. ಸರ್ವೆ ನಂ.198/1 ಮತ್ತು 198/3 ರ ಎರಡು ಲಾಟುಗಳಲ್ಲಿ ಸ್ವತ್ತನ್ನು ಖರೀದಿಸಲಾಗಿದೆ ಎಂದರೆ ಸರಿ. ನನ್ನ ತಂದೆ ಸದರಿ ಸ್ವತ್ತನ್ನು ಖರೀದಿಸುವ ಸಂದರ್ಭದಲ್ಲಿ ಆ ಸ್ವತ್ತುಗಳು ಅನ್ಯಕ್ರಾಂತವಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಸಂದರ್ಭದಲ್ಲಿ ನಾನು ಜನಿಸಿರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ನನ್ನ ತಂದೆ ಅವರ ಪಿತ್ರಾರ್ಜಿತ ಆಸ್ತಿಗಳಿಂದ ಬಂದ ಗಳಿಕೆಯಿಂದ ಖರೀದಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ ರವೀಂದ್ರಕುಮಾರ್ ರವರು ದಾವ ಆಸ್ತಿಯನ್ನು ಜಿ ಡಿ ಚಾವ್ಡ ಕೋಂ ರಾಮ್ ಚಾವ್ಡ ರವರಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಖರೀದಿಸಿದ ಕಾಲಕ್ಕೆ ಅದರ ಅಸೆಸ್ಮೆಂಟ್ ನಂ.991 ಆಗಿತ್ತು ಎಂದರೆ ಸಾಕ್ಷಿ ನನಗೆ ಹಳೆಯ ಅಸೆಸ್ಮೆಂಟ್ ನಂಬರ್ ಗೊತ್ತಿಲ್ಲ ಹೊಸ ನಂಬರ್ ಗೊತ್ತು ಎಂದು ನುಡಿಯುತ್ತಾರೆ.

2. ಪ್ರಸ್ತುತ ದಾವೆಯಲ್ಲಿ ವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ನಾನು ಪರಿಶೀಲಿಸಿರುತ್ತೇನೆ. ನಿಪಿ-2 ರ ದಾಖಲೆಯನ್ನು ನಾನು ನೋಡಿದ್ದೇನಾ ಎಂದರೆ ಸಾಕ್ಷಿ ನೋಡಿದ್ದೇನೆ, ಆದರೆ ಆ ದಾಖಲೆಯನ್ನು ನಾನು

ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ರ ದಿನಾಂಕ 10/09/1979 ರ ಕ್ರಯಪತ್ರದಲ್ಲಿ ದಾವಾ ಸ್ವತ್ತಿನ ಅಸೆಸ್ಮೆಂಟ್ ನಂ.791 ಎಂದು ನಮೂದು ಇರುತ್ತದೆ ಎಂದರೆ ಸರಿ. ಮುನಿಸಿಪಾಲಿಟಿಯಲ್ಲಿ 5 ವರ್ಷಕ್ಕೊಮ್ಮೆ ಅಸೆಸ್ಮೆಂಟ್ ಬದಲಾವಣೆಯಾಗುತ್ತದೆ, ಅದರಂತೆ ಕ್ರಯದ ಕರಾರು ಪತ್ರವನ್ನು ಬರೆದುಕೊಡುವ ಸಮಯದಲ್ಲಿ ದಾವಾ ಆಸ್ತಿಯ ಅಸೆಸ್ಮೆಂಟ್ ನಂ.1977/1 ಮತ್ತು 1914/1 ರಂತೆ ಇರುತ್ತದೆ ಎಂದರೆ ಸಾಕ್ಷಿ ದಾವಾ ಸ್ವತ್ತಿನ ಅಸೆಸ್ಮೆಂಟ್ ಸಂಖ್ಯೆ ಮೇಲೆ ಹೇಳಿದಂತೆ ಬದಲಾವಣೆಯಾಗಿರುವುದು ಸರಿ, ಆದರೆ ವಾದಿಗಳಿಗೆ ನಾನು ಯಾವುದೇ ಪತ್ರ ಬರೆದುಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ರ ಕ್ರಯಪತ್ರದಲ್ಲಿ ಎರಡು ಲಾಟುಗಳನ್ನು ಖರೀದಿಸಲಾಗಿದ್ದು ಅದರಲ್ಲಿ ಒಂದು ಸರ್ವೆ ನಂಬರಿನ ಸ್ವತ್ತು ಪೂರ್ವ-ಪಶ್ಚಿಮ 356 ಅಡಿಗಳು ಮತ್ತು ದಕ್ಷಿಣದಲ್ಲಿ 320 ಅಡಿಗಳು ಹಾಗೂ ದಕ್ಷಿಣೋತ್ತರವಾಗಿ 120 ಅಡಿಗಳು ಎಂದು ನಮೂದು ಇರುತ್ತದೆ ಎಂದರೆ ಸರಿ. ಮತ್ತೊಂದು ಲಾಟಿನಲ್ಲಿ ದಕ್ಷಿಣ ಭಾಗದ ಪಶ್ಚಿಮೋತ್ತರ ಭಾಗದಲ್ಲಿ 278 ಅಡಿಗಳು ದಕ್ಷಿಣದಲ್ಲಿ 198 ಅಡಿಗಳು ದಕ್ಷಿಣೋತ್ತರದಲ್ಲಿ 280 ಅಡಿಗಳು ಎಂದು ನಮೂದು ಇರುತ್ತದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.